1. ಶ್ರೇಷ್ಠಾತ್ಮನಾದ ನಾನು ಕಲ್ಪವೃಕ್ಷಕ್ಕೆ ಪೂರ್ವಜನು ಮತ್ತು ಪೂಜ್ಯನು.

2. ನಾನು ಬ್ರಹ್ಮಾತಂದೆಗೆ ಸಹಯೋಗಿಯಾದ ಮಾಸ್ಟರ್ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಫಾದರ್.

3. ನಾನು ತಂದೆಯ ಮೂಲಕ ಲಭಿಸಿರುವ ಶಕ್ತಿಗಳಿಂದ ವಿಶ್ವದಲ್ಲಿರುವ ಸರ್ವಾತ್ಮರ ಪಾಲನೆಯನ್ನು ಮಾಡುವ ಪೂರ್ವಜ ಮತ್ತು ಪೂಜ್ಯ ಸ್ವರೂಪ.

4. ನಾನು ಯಾವ ಆತ್ಮನನ್ನಾದರೂ ಭೇಟಿಯಾಗುತ್ತಿರುವಾಗ ನಾನು ಪೂರ್ವಜನು ಎಂಬ ನಶೆಯಿಂದ, ಸ್ಮೃತಿಯಿಂದ, ವೃತ್ತಿಯಿಂದ, ದೃಷ್ಟಿಯಿಂದ ಭೇಟಿಯಾಗಿ (ಸೇವೆಯನ್ನು ಮಾಡಿ) ಅವರಿಗೂ ಸಹ ಇವರು ನಮ್ಮವರು, ಪೂರ್ವಜರು, ಇಷ್ಟ ದೇವತೆಯರು ಎಂಬ ಅನುಭವವನ್ನು ಮಾಡಿಸುತ್ತಿದ್ದೇನೆ.

5. ನನ್ನಲ್ಲಿ ಪೂರ್ವಜರಾದ ನಾವೇ ಪೂಜ್ಯರಾಗುತ್ತೇವೆ ಎಂಬ ನಶೆ ಮತ್ತು ಸ್ಮೃತಿ ಸದಾ ಅವಿನಾಶಿಯಾಗಿ ಇದೆ.

6. ನಾನು ಒಂದೇ ಸಮಯದಲ್ಲಿ ಮನಸಾ, ವಾಚಾ, ಕರ್ಮಣಾ ಮೂರೂ ಸೇವೆಗಳನ್ನು ಜೊತೆ ಜೊತೆ ಮಾಡಿ ಸೇವೆಯಲ್ಲಿ ಹೆಚ್ಚು ಸಫಲತೆಯನ್ನು ಪಡೆಯುತ್ತಾ ಸೇವೆಯ ವೇಗ ಮತ್ತು ವೃದ್ಧಿಯನ್ನು ಮಾಡಿದ್ದೇನೆ.

7. ನಾನು ನಿರ್ವಿಘ್ನ ಸ್ಥಿತಿಯಲ್ಲಿ ಸ್ಥಿತವಾಗಿ ವಿಶ್ವದಲ್ಲಿರುವ ಸರ್ವಾತ್ಮರನ್ನು ಸರ್ವಸಮಸ್ಯೆಗಳಿಂದ ನಿರ್ವಿಘ್ನವಾಗಿ ಮಾಡುವ ವಿಘ್ನ ವಿನಾಶಕನು.

8. ನಾನು ಪ್ರತಿಯೊಂದು ಆತ್ಮನನ್ನು ಆತ್ಮಿಕ ದೃಷ್ಟಿಯಿಂದ ನೋಡುತ್ತಾ ನಿಜ ಸಂಸ್ಕಾರಗಳಿಂದ ಶುಭ ಭಾವನೆ, ಶುಭಕಾಮನೆ, ಪರಿವರ್ತನೆ ಮಾಡಬೇಕೆಂಬ ಶ್ರೇಷ್ಠ ಭಾವವನ್ನು ನನ್ನಲ್ಲಿ ಪ್ರತ್ಯಕ್ಷ ಮಾಡಿದ್ದೇನೆ.

9. "ಕಲ್ಪಪೂರ್ವದ ದೇವಾತ್ಮರು ಶ್ರೇಷ್ಠ ಬ್ರಾಹ್ಮಣಾತ್ಮರನ್ನು ಭೇಟಿಯಾಗಿದ್ದೇವೆ" ಎಂಬ ಸ್ವರೂಪದಿಂದ ನಾನು ಸಂಬಂಧ ಸಂಪರ್ಕದಲ್ಲಿ ಬರುತ್ತಿದ್ದೇನೆ.

10. ನಾನು ಇಡೀ ದಿನ ದೃಷ್ಟಿ, ವೃತ್ತಿ, ಮಾತು ಮತ್ತು ಭಾವನೆಯ ಮೂಲಕ ಆಶೀರ್ವಾದಗಳನ್ನೇ ಕೊಡುತ್ತಿದ್ದೇನೆ ಮತ್ತು ಆಶೀರ್ವಾದಗಳನ್ನೇ ಪಡೆದುಕೊಳ್ಳುವ ವರದಾನಿ,  ಮಹಾದಾನಿಯಾಗಿದ್ದೇನೆ.

11. ನನಗೆ ವಿರೋಧ ಬಂದರೂ ಬ್ರಹ್ಮಾ ತಂದೆಯ ಸಮಾನವಾಗಿ ನನ್ನ ವೃತ್ತಿ, ದೃಷ್ಟಿಯಲ್ಲಿ ಇವರು ಕಲ್ಪಪೂರ್ವದ ನಮ್ಮ ಪರಿವಾರವೇ, ಬ್ರಾಹ್ಮಣ ಪರಿವಾರವೇ ನಾನು ಪರಿವರ್ತನೆಯಾಗಿ ಇವರನ್ನು ಬದಲಾಯಿಸಬೇಕು ಇದು ನನ್ನ ಜವಾಬ್ದಾರಿ ಎಂಬ ಭಾವನೆಯಿಂದ ಇದ್ದೇನೆ.

